**ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಲಘಟಗಿ**

**ಸಿ ಸಿ ನಂ. 1842/2022**

**ಚಾ.ಸಾ.** 10

**ಪ್ರಾ.ಸಾ.** 3

**ದಿನಾಂಕಃ 17.04.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೊಧಿಸಲಾಯಿತು.**

| | |
|---|---|
| ಸಾಕ್ಷಿಯ ಹೆಸರು | ಮಲ್ಲಿಕಾರ್ಜುನ ಚೌಡನ್ನವರ |
| ತಂದೆಃ ಗಂಡನ ಹೆಸರು | ಫಕೀರಪ್ಪ |
| ಉದ್ಯೋಗ | ಎ ಎಸ್ ಐ |
| ವಯಸ್ಸು | 59 ವರ್ಷ |
| ವಾಸಸ್ಥಳ | ನವಲಗುಂದ |

**ಮುಂದುವರೆದ ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ಯವರಿಂದ**

ಸದರಿ ದೂರನ್ನು ಸ್ವೀಕರಿಸಿ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿದೆನು. ನನಗೆ ಹಾಜರುಪಡಿಸಿದ ಮುದ್ದೆಮಾಲನ್ನು ನೋಡಲಾಗಿ ಅದರಲ್ಲಿ ಒಟ್ಟು 3,552 ಮದ್ಯದ ಟೆಟ್ರಾ ಪಾಕೇಟ್ ಗಳು ಇದ್ದು ಅವುಗಳ ಒಟ್ಟು ಬೆಲೆ 1,24,781/- ರೂ ಇರುತ್ತದೆ. 90 ಮಿಲಿಯ 480 ಗ್ರೀನ್ ವಿಸ್ಕಿಯ ಟೆಟ್ರಾ ಪಾಕೇಟ್ ಗಳು, 180 ಮಿಲಿಯ ವೈಪರ್ ವಿಸ್ಕಿ 45 ಟೆಟ್ರಾ ಪಾಕೇಟ್ ಗಳು ಅದರಲ್ಲಿ ಇದ್ದವು. ಒಂದು ಬಿಳಿ ಬಣ್ಣದ ಮಾರುತಿ ವ್ಯಾನ್ ಸಂಖ್ಯೆ ಕೆ ಎ 25 ಎಮ್ ಬಿ 7343 ಸಹ ನನ್ನ ಮುಂದೆ ಹಾಜರುಪಡಿಸಿದ್ದು ಜಪ್ತು ಪಡಿಸಿಕೊಂಡು ಠಾಣೆಯ ತಾಬಾದಲ್ಲಿ ಇರಿಸಿದೆ.

ದೊರೆತ ಸದರಿ ಮುದ್ದೆಮಾಲನ್ನು ಎಫ್ ಎಸ್ ಎಲ್ ಧಾರವಾಡ ರವರಿಗೆ ಕಳುಹಿಸಲಾಯಿತು. ದಿಃ 13.03.2022 ರಂದು ಎಫ್ ಎಸ್ ಎಲ್ ವರದಿಯನ್ನು ಸ್ವೀಕರಿಸಿ ಅಂತಿಮ ವರದಿಯಲ್ಲಿ ಅಳವಡಿಸಿಕೊಂಡೆನು. ಅದೇ ದಿನದಂದು ಚಾಸಾ-8 ರವರ ಹೇಳಿಕೆಯನ್ನು ಪಡೆದುಕೊಂಡು ಕಡತಕ್ಕೆ

ಅಳವಡಿಸಿಕೊಂಡೆನು. ದಿಃ01.07.2022 ರಂದು ಆರೋಪಿತರ ವಿರುದ್ಧ ಮಾನ್ಯ ನ್ಯಾಯಾಲಯಕ್ಕೆ ಅಂತಿಮ ವರದಿಯನ್ನು ಸಲ್ಲಿಸಿದೆನು.

ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ1 ಎಂದು ಗುರುತಿಸಲಾಗಿದೆ. ಅದರ ಮೇಲೆ ಇರುವ ಹಿಂಬರಹ ಮತ್ತು ಸಾಕ್ಷಿಯನ್ನು ಸಹಿಯನ್ನು ನಿಪಿ1(ಬಿ) ಮತ್ತು (ಸಿ) ಎಂದು ಗುರುತಿಸಲಾಯಿತು.

ಸಾಕ್ಷಿಯು ಎಫ್ ಎಸ್ ಎಲ್ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ10 ಎಂದು ಗುರುತಿಸಲಾಯಿತು. ಅದರ ಮೇಲೆ ಇರುವ ಸಾಕ್ಷಿಯನ್ನು ಸಹಿಯನ್ನು ನಿಪಿ10(ಎ) ಎಂದು ಗುರುತಿಸಲಾಯಿತು.

ಸಾಕ್ಷಿಯು ಪ್ರಥಮ ವರ್ತಮಾನ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ11 ಎಂದು ಗುರುತಿಸಲಾಯಿತು. ಅದರ ಮೇಲೆ ಇರುವ ಸಾಕ್ಷಿಯನ್ನು ಸಹಿಯನ್ನು ನಿಪಿ11(ಎ) ಎಂದು ಗುರುತಿಸಲಾಯಿತು.

ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಮುದ್ದೆಮಾಲನ್ನು ಈಗಾಗಲೇ ಮು.ಮಾ 1 ಎಂದು ಗುರುತಿಸಲಾಗಿದೆ.

ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ನೋಡಿ ಗುರುತಿಸಿದ್ದು ಅವರ ಹೆಸರು ಮಂಜುನಾಥ ಮತ್ತು ಮಲ್ಲಯ್ಯ ಎಂದು ಹೇಳಿದ್ದರು.

**<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ. ವಿ ಬಿ ಎಸ್ ವಕೀಲರಿಂದ</u>**

ನಾನು ಈ ಪ್ರಕರಣದ ಕಡತವನ್ನು ವಹಿಸಿಕೊಂಡ ನಂತರ ಅದನ್ನು ಓದಿ ತಿಳಿದುಕೊಂಡಿರುತ್ತೇನೆ. ಸದರಿ ಕಡತವನ್ನು ಪರಿಶೀಲನೆ ಮಾಡಿದ ನಂತರ ಅದರಲ್ಲಿ ಯಾವುದೇ ರೀತಿಯ ಸತ್ಯಾಂಶಗಳು ನನ್ನ ತನಿಖಾ ಕಾಲದಲ್ಲಿ ಕಂಡು ಬಂದಿಲ್ಲ ಎಂದರೆ ಸರಿಯಲ್ಲ. ದೊರೆತ ಮುದ್ದೆಮಾಲನ್ನು ಎಫ್ ಎಸ್ ಎಲ್ ಧಾರವಾಡದವರಿಗೆ ಕಳುಹಿಸಿಲ್ಲ ಎಂದರೆ ಸರಿಯಿಲ್ಲ. ನಿಪಿ10 ರಲ್ಲಿರುವ ವರದಿಯನ್ನು ನಾನೇ ತಯಾರಿಸಿ ಎಫ್ ಎಸ್ ಎಲ್ ಧಾರವಾಡದವರಿಗೆ ಕಳುಹಿಸಿದ್ದೇನೆ ಎಂದರೆ ಸರಿಯಲ್ಲ. ಚಾಸಾ-4 ರಿಂದ 8 ರವರ ಹೇಳಿಕೆಗಳನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣದ ಪಿರ್ಯಾದಿದಾರರು ನನ್ನ

ಮೇಲಾಧಿಕಾರಿಗಳು ಎಂದರೆ ಸರಿ. ಸದರಿ ಪಿರ್ಯಾದಿದಾರರು ನನ್ನ ಮೇಲಾಧಿಕಾರಿಗಳು ಇದ್ದ ಕಾರಣ ಅವರ ನಿರ್ದೇಶನದಂತೆ ನಾನು ಈ ಪ್ರಕರಣದ ತನಿಖೆ ಮಾಡಿದ್ದೇನೆ ಎಂದರೆ ಸರಿ. ಈ ಪ್ರಕರಣದ ಪಿರ್ಯಾದಿದಾರು ನನ್ನ ಮೇಲಾಧಿಕಾರಿಗಳು ಇದ್ದು ಸದರಿಯವರು ಹೇಳಿದಂತೆ ಚಾರ್ಜಶೀಟ್ ತಯಾರು ಮಾಡಿರುತ್ತೇನೆ ಎಂದರೆ ಸರಿ. ಪಿರ್ಯಾದಿದಾರರು ನಿಮ್ಮ ಮೇಲಾಧಿಕಾರಿಗಳು ಇದ್ದು ಸದರಿಯವರು ಹೇಳಿದಂತೆ ಸುಳ್ಳು ಚಾರ್ಜಶೀಟ್ ತಯಾರು ಮಾಡಿ ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿದ್ದಿರಾ ಎಂದರೆ ಸಾಕ್ಷಿಯು ಮೇಲಾಧಿಕಾರಿಗಳ ಮಾತನ್ನು ಕೇಳಬೇಕಾಗಿರುವುದರಿಂದ ತಾನು ಸದರಿಯವರು ಹೇಳಿದಂತೆ ಚಾರ್ಜಶೀಟ್ ತಯಾರು ಮಾಡಿ ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುವುದಾಗಿ ಹಾಗಾಗಿ ಸದರಿ ಚಾರ್ಜಶೀಟ್ ಸುಳ್ಳು ಇಲ್ಲ ಎಂದು ನುಡಿಯುತ್ತಾರೆ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ರೀತಿಯ ವೈಯಕ್ತಿಕ ಮಾಹಿತಿ ಇಲ್ಲ. ಈ ಪ್ರಕರಣಕ್ಕೂ ಹಾಗೂ ಆರೋಪಿಗೂ ಯಾವುದೇ ರೀತಿಯ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಯಾವುದೇ ರೀತಿ ತಪ್ಪು ಮಾಡದೇ ಇದ್ದರೂ ಸಹ ಸುಳ್ಳು ಚಾರ್ಜಶೀಟ್ ತಯಾರು ಮಾಡಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು-ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

**ಓ ಹೇ ಕೆ ಸರಿ ಇದೆ,**

**ದಿವಾಣಿ ನ್ಯಾಯಾಧೀಶರು ಹಾಗೂ**

**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಲಘಟಗಿ.**